# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** 2018-19ನೇ ಸಾಲಿನ ಶಾಸನಬದ್ಧ ಅನುದಾನದ ನಾಲ್ಕನೇ ತ್ರೈಮಾಸಿಕ ಕಂತನ್ನು ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:**

1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 129 ಗ್ರಾಪಂಕಾ 2002, ದಿನಾಂಕ: 02-12-2003.
2) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 234 ಗ್ರಾಪಂಅ 2007, ದಿನಾಂಕ:27-03-2008.
3) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 10 ಗ್ರಾಪಸ 2015, ದಿನಾಂಕ: 10-03-2015.
4) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 252 ಗ್ರಾಪಂಅ 2016, ದಿನಾಂಕ: 23-03-2016.
5) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 74 ಗ್ರಾಪಂಸಿ 2017 (ಭಾಗ-1) ಬೆಂಗಳೂರು, ದಿನಾಂಕ: 02-03-2018.
6) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 74 ಗ್ರಾಪಂಸಿ 2017 (ಭಾಗ-1) ಬೆಂಗಳೂರು, ದಿನಾಂಕ: 12-03-2018.
7) ಸರ್ಕಾರದ ಸಮಸಂಖ್ಯೆ ಆದೇಶ, ದಿನಾಂಕ 20.04.2018.
8) ಸರ್ಕಾರದ ಸಮಸಂಖ್ಯೆ ಆದೇಶ, ದಿನಾಂಕ 17.09.2018.
9) ಸರ್ಕಾರದ ಸಮಸಂಖ್ಯೆ ಆದೇಶ, ದಿನಾಂಕ 23.11.2018.

*******

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರದ ಆದೇಶದಲ್ಲಿ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡುವ ಸರ್ಕಾರದ ಅನುದಾನವನ್ನು ರಾಜ್ಯ ಹುಜೂರು ಖಜಾನೆಯಿಂದ ಪೇಯೀಸ್ ರಸೀದಿ ಮೇಲೆ ಪಡೆದು ರಾಷ್ಟ್ರೀಯ ಬ್ಯಾಂಕುಗಳ ಮುಖಾಂತರ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲು ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರಿಗೆ ಪ್ರತ್ಯಾಯೋಜಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರದ ಆದೇಶದಲ್ಲಿ ಗ್ರಾಮ ಪಂಚಾಯಿತಿ ಸಿಬ್ಬಂದಿ ವೇತನಕ್ಕಾಗಿ ಶೇಕಡ 40ರಷ್ಟು ಅನುದಾನವನ್ನು ಮತ್ತು ಉಳಿದ ಶೇಕಡ 60 ರಷ್ಟನ್ನು ಗ್ರಾಮ ಪಂಚಾಯಿತಿಗಳ ಚಾಲ್ತಿ ತಿಂಗಳ ವಿದ್ಯುತ್ ಬಿಲ್ ಪಾವತಿಸಲು ಬಿಡುಗಡೆ ಮಾಡಲು ಸರ್ಕಾರವು ಆದೇಶಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(3)ರಲ್ಲಿ ಶಾಸನಬದ್ಧ ಅನುದಾನದ ಶೇ.60 ರಷ್ಟು ಹಾಗೂ ಕೇಂದ್ರ ಹಣಕಾಸು ಆಯೋಗದಿಂದ ಬಿಡುಗಡೆಯಾಗುವ 13ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನ ಹಾಗೂ ಸಾಮಾನ್ಯ ನಿರ್ವಹಣಾ ಅನುದಾನದ 25%ರಷ್ಟು ಮೊತ್ತವನ್ನು ಪ್ರತಿ ಗ್ರಾಮ ಪಂಚಾಯಿತಿಗಳಲ್ಲಿ ಇದಕ್ಕಾಗಿ

ತೆರೆಯಲಾಗಿರುವ ESCROW ಖಾತೆಗಳಿಗೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮೂಲಕ ಬಿಡುಗಡೆ ಮಾಡಲು ಸರ್ಕಾರವು ಆದೇಶಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(4)ರಲ್ಲಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳು, ಗ್ರಾಮ ಪಂಚಾಯಿತಿ ಸಿಬ್ಬಂದಿ ವೇತನಕ್ಕಾಗಿ ಉಪಯೋಗಿಸಿಕೊಳ್ಳಲು ರಾಜ್ಯ ಸರ್ಕಾರದಿಂದ ಬಿಡುಗಡೆಯಾಗುವ ಶಾಸನಬದ್ಧ ಅನುದಾನದ ಶೇ 40ರಷ್ಟನ್ನು ಗ್ರಾಮ ಪಂಚಾಯಿತಿಗಳಿಗೆ ನೇರವಾಗಿ ಬಿಡುಗಡೆ ಮಾಡಲು ಗ್ರಾಮ ಪಂಚಾಯಿತಿಗಳ ಹೆಸರಿನಲ್ಲಿ ಸ್ಥಳೀಯ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಗಳಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಗಳು "ಗ್ರಾಮ ಪಂಚಾಯಿತಿ ಸಿಬ್ಬಂದಿ ವೇತನ" ಖಾತೆಗಳ ಹೆಸರಿನಲ್ಲಿ ಪ್ರತ್ಯೇಕ ಖಾತೆಗಳನ್ನು ತೆರೆಯಲು ಸರ್ಕಾರವು ಆದೇಶಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (5)ರ ಸರ್ಕಾರದ ಆದೇಶದಲ್ಲಿ ಪ್ರಸ್ತುತ ರಾಜ್ಯದ ಗ್ರಾಮ ಪಂಚಾಯತಿಗಳ ಸಿಬ್ಬಂದಿ ವರ್ಗದ ಮಾದರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 1) ಬಿಲ್ ಕಲೆಕ್ಟರ್, 2) ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್, 3) ವಾಟರ್‌ಮೆನ್/ಪಂಪ್ ಆಪರೇಟರ್/ಪಂಪ್ ಮೆಕಾನಿಕ್, 4) ಜವಾನ ಮತ್ತು 5) ಸ್ವಚ್ಛತಾಗಾರ ವೃಂದದ ಗ್ರಾಮ ಪಂಚಾಯಿತಿ ನೌಕರರುಗಳಿಗೆ ದಿನಾಂಕ:01-03-2018ರಿಂದ ಜಾರಿಗೆ ಬರುವಂತೆ ಸರ್ಕಾರದ ನಿಧಿಯಿಂದ ವೇತನ ಪಾವತಿಸಲು ಆದೇಶಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (6)ರ ಸರ್ಕಾರದ ಆದೇಶದಲ್ಲಿ ಗ್ರಾಮ ಪಂಚಾಯಿತಿ ನೌಕರರುಗಳಿಗೆ ಸರ್ಕಾರದಿಂದ ವೇತನ ಪಾವತಿಸುವ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಿದೆ.

2018-19ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ **2515-00-198-1-07-300** ಅಡಿಯಲ್ಲಿ "ಗ್ರಾಮ ಪಂಚಾಯಿತಿಗಳಿಗೆ ಸಹಾಯ" ಎಂಬ ಹೆಸರಿನಲ್ಲಿ ಒಟ್ಟು ರೂ.**902,99,00,000/-** ನಿಗಧಿಪಡಿಸಲಾಗಿದೆ (ಒಂಬೈನೂರ ಎರಡು ಕೋಟಿ ತೊಂಬತ್ತೊಂಬತ್ತು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ಒದಗಿಸಲಾಗಿದೆ. ಈ ಅನುದಾನದಲ್ಲಿ 2011ನೇ ವರ್ಷದ ಜನಗಣತಿ ಆಧಾರದ ಮೇಲೆ ಎಂಟು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಪ್ರತಿ ಗ್ರಾಮ ಪಂಚಾಯತಿಗೆ ವಾರ್ಷಿಕವಾಗಿ ತಲಾ ರೂ. 10.00 ಲಕ್ಷಗಳು ಹಾಗೂ ಎಂಟು ಸಾವಿರಕ್ಕಿಂತ ಹೆಚ್ಚಿಗೆ ಅಂದರೆ ಪ್ರತಿ ಸಾವಿರ ಜನಸಂಖ್ಯೆ ಏರಿಕೆಗೆ ಅನುಗುಣವಾಗಿ ರೂ. 1.00 ಲಕ್ಷಗಳನ್ನು ಹೆಚ್ಚಿಸಿದಲ್ಲಿ ವಾರ್ಷಿಕವಾಗಿ **ರೂ. 639,29,00,000/-** (ಆರುನೂರು ಮೂವತ್ತೊಂಬತ್ತು ಕೋಟಿ ಇಪ್ಪತ್ತೊಂಬತ್ತು ಲಕ್ಷ ರೂಪಾಯಿಗಳು ಮಾತ್ರ) ಗಳಾಗುತ್ತದೆ. **ರೂ. 639,29,00,000/-** ಪೈಕಿ ಶೇ.60 ರಷ್ಟನ್ನು ಗ್ರಾಮ ಪಂಚಾಯತಿಗಳ ವಿದ್ಯುತ್ ಬಿಲ್ ಮೊತ್ತ ಭರಿಸಲು **ರೂ. 383,57,40,000/-**(ಮುನ್ನೂರು ಎಂಬತ್ಮೂರು ಕೋಟಿ ಐವತ್ತೇಳು ಲಕ್ಷ ನಲವತ್ತು ಸಾವಿರ ರೂಪಾಯಿಗಳು ಮಾತ್ರ) ಇನ್ನುಳಿದ **ರೂ. 519,41,60,000/-**(ಐನೂರು ಹತ್ತೊಂಬತ್ತು ಕೋಟಿ ನಲವತ್ತೊಂದು ಲಕ್ಷ ಅರವತ್ತು ಸಾವಿರ ರೂಪಾಯಿಗಳು ಮಾತ್ರ) ಗ್ರಾಮ ಪಂಚಾಯತಿ ನೌಕರರ ವೇತನಕ್ಕಾಗಿ ಉಪಯೋಗಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (7) ರ ಸರ್ಕಾರದ ಆದೇಶದಲ್ಲಿ, 6022 ಗ್ರಾಮ ಪಂಚಾಯತಿಗಳಿಗೆ ಮೊದಲನೇ ಕಂತಿನ ಶಾಸನಬದ್ಧ ಅನುದಾನವಾಗಿ ರೂ. 225,66,36,388.00 ಬಿಡುಗಡೆಗೊಳಿಸಲಾಗಿದೆ.

ಮೇಲೆ ಓದಾಲಾದ ಕ್ರಮ ಸಂಖ್ಯೆ (8) ರ ಸರ್ಕಾರದ ಆದೇಶದಲ್ಲಿ, 6021 ಗ್ರಾಮ ಪಂಚಾಯತಿಗಳಿಗೆ ಎರಡನೇ ಕಂತಿನ ಶಾಸನಬದ್ಧ ಅನುದಾನವಾಗಿ ರೂ. 225,65,29,823.00 ಬಿಡುಗಡೆಗೊಳಿಸಲಾಗಿದೆ.

ಮೇಲೆ ಓದಾಲಾದ ಕ್ರಮ ಸಂಖ್ಯೆ (9) ರ ಸರ್ಕಾರದ ಆದೇಶದಲ್ಲಿ, 6021 ಗ್ರಾಮ ಪಂಚಾಯತಿಗಳಿಗೆ ಎರಡನೇ ಕಂತಿನ ಶಾಸನಬದ್ಧ ಅನುದಾನವಾಗಿ ರೂ. 225,91,49,767.00 ಬಿಡುಗಡೆಗೊಳಿಸಲಾಗಿದೆ.

ಪ್ರಸ್ತುತ ರಾಜ್ಯದಲ್ಲಿ ಒಟ್ಟಾರೆ 6021 ಗ್ರಾಮ ಪಂಚಾಯಿತಿಗಳಿದ್ದು, ನಾಲ್ಕನೇ ತ್ರೈಮಾಸಿಕ ಕಂತು ಅಂದರೆ ಜನವರಿ 2018 ರಿಂದ ಮಾರ್ಚ್ 2018 ರವರೆಗಿನ ಗ್ರಾಮ ಪಂಚಾಯಿತಿಗಳ ಜನಸಂಖ್ಯೆ ಆಧಾರದ ಮೇಲೆ ವಿದ್ಯುತ್ ಬಿಲ್ ಪಾವತಿಸಲು **ರೂ. 95,73,15,000/-** (ತೊಂಬತ್ತೈದು ಕೋಟಿ ಎಪ್ಪತ್ಮೂರು ಲಕ್ಷ ಹದಿನೈದು ಸಾವಿರ ರೂಪಾಯಿಗಳು ಮಾತ್ರ) ಹಾಗೂ **ಈ ಕೆಳಕಂಡಂತೆ ಗ್ರಾಮ ಪಂಚಾಯಿತಿಗಳ ನೌಕರರ ವೇತನ ಪಾವತಿಸಲು ರೂ.** 130,02,68,974/- (ಒಂದು ನೂರು ಮೂವತ್ತು ಕೋಟಿ ಎರಡು ಲಕ್ಷ ಅರವತ್ತೆಂಟು ಸಾವಿರ ಒಂಬೈನೂರ ಎಪ್ಪತ್ನಾಲ್ಕು ರೂಪಾಯಿಗಳು ಮಾತ್ರ) ಸೇರಿದಂತೆ ಒಟ್ಟು **ರೂ.** 225,75,83,974/- (ಎರಡುನೂರು ಇಪ್ಪತ್ತೈದು ಕೋಟಿ ಎಪ್ಪತ್ತೈದು ಲಕ್ಷ ಎಂಬತ್ಮೂರು ಸಾವಿರ ಒಂಬೈನೂರು ಎಪ್ಪತ್ನಾಲ್ಕು ರೂಪಾಯಿಗಳು ಮಾತ್ರ) ಬಿಡುಗಡೆ ಮಾಡಲು ಸರ್ಕಾರವು ನಿರ್ಧರಿಸಿದೆ.

| ನೌಕರರ ವೇತನ ಪಾವತಿಸಲು ಅವಶ್ಯವಿರುವ ಮೊತ್ತ | ಕಡಿತಗೊಳಿಸಬೇಕಾದ ಶೇಕಡವಾರು | ಗ್ರಾಮ ಪಂಚಾಯತಿಗಳ ಸಂಖ್ಯೆ | ಬಿಡುಗಡೆಗೊಳಿಸುವ ಮೊತ್ತ ರೂ |
|---|---|---|---|
| ರೂ. 2.00 ಲಕ್ಷಗಳ ವರೆಗೆ | - | 2096 | 299206107 |
| ರೂ. 2.00 ಲಕ್ಷಗಳಿಂದ ರೂ. 3.00 ಲಕ್ಷಗಳ ವರೆಗೆ | ಶೇ 10% | 1746 | 394396555 |
| ರೂ. 3.00 ಲಕ್ಷಗಳಿಂದ ರೂ. 4.00 ಲಕ್ಷಗಳ ವರೆಗೆ | ಶೇ 20% | 1041 | 291311146 |
| ರೂ. 4.00 ಲಕ್ಷಗಳಿಂದ ರೂ. 5.00 ಲಕ್ಷಗಳ ವರೆಗೆ | ಶೇ 35% | 519 | 151048002 |
| ರೂ. 5.00 ಲಕ್ಷಗಳಿಂದ ರೂ. 7.00 ಲಕ್ಷಗಳ ವರೆಗೆ | ಶೇ 40% | 343 | 117498971 |
| ರೂ. 7.00 ಲಕ್ಷಗಳ ಮೇಲ್ಪಟ್ಟು | ಶೇ 45% | 89 | 41051953 |
| ಒಂದನೇ, ಎರಡನೇ ಹಾಗೂ ಮೂರನೇ ತ್ರೈಮಾಸಿಕದಲ್ಲಿ ಅನುಮೋದಿತ ನೌಕರರುಗಳಿಗೆ ಪಾವತಿಸಲು ಬೇಕಾದ ಅನುದಾನಕ್ಕಿಂತ ಹೆಚ್ಚಾಗಿ ಅನುದಾನ ಬಿಡುಗಡೆಯಾಗಿದ್ದು ನಾಲ್ಕನೇ ತ್ರೈಮಾಸಿಕದಲ್ಲಿ ಯಾವುದೇ ಅನುದಾನ ಬಿಡುಗಡೆಗೊಳಿಸದ ಗ್ರಾಮ ಪಂಚಾಯತಿಗಳು | | 91 | 00 |
| ಪಂಚತಂತ್ರ ತಂತ್ರಾಂಶದಲ್ಲಿ ನೌಕರರ ವಿವರಗಳನ್ನು ಅನುಮೋದಿಸದೇ ಇರುವ ಗ್ರಾಮ ಪಂಚಾಯತಿಗಳು | | 96 | 5756240 |
| ಒಟ್ಟು | | 6021 | 1300268974 |

ಅದರಂತೆ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 356 ಗ್ರಾಪಂಅ 2018,ಬೆಂಗಳೂರು ದಿನಾಂಕ: 29-01-2019.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2018-19ನೇ ಸಾಲಿನ ಶಾಸನಬದ್ಧ ಅನುದಾನದ ನಾಲ್ಕನೇ ತ್ರೈಮಾಸಿಕ ಕಂತಿನ ಅನುದಾನದ ಮೊತ್ತ ರೂ. 225,75,83,974/- (ಎರಡುನೂರು ಇಪ್ಪತ್ತೈದು ಕೋಟಿ ಎಪ್ಪತ್ತೈದು ಲಕ್ಷ ಎಂಬತ್ಮೂರು ಸಾವಿರ ಒಂಬೈನೂರು ಎಪ್ಪತ್ನಾಲ್ಕು ರೂಪಾಯಿಗಳು ಮಾತ್ರ), ಲೆಕ್ಕ ಶೀರ್ಷಿಕೆ **2515-00-198-1-07-300** ಅಡಿಯಲ್ಲಿ 6021 ಗ್ರಾಮ ಪಂಚಾಯಿತಿಗಳಿಗೆ **ಅನುಬಂಧ-1** ರಲ್ಲಿರುವಂತೆ ಬಿಡುಗಡೆ ಮಾಡಿ ಆದೇಶಿಸಿದೆ. ಗ್ರಾಮ ಪಂಚಾಯಿತಿವಾರು ಬಿಡುಗಡೆ ಮಾಡಿರುವ ಅನುದಾನದ ವಿವರವನ್ನು **ಅನುಬಂಧ-2** ರಲ್ಲಿ ನೀಡಿದೆ. ಈ ಕೆಳಕಂಡ ಕೋಷ್ಟಕದಲ್ಲಿರುವಂತೆ ಕ್ರಮ ವಹಿಸಲು **ವ್ಯವಸ್ಥಾಪಕರು, ಸಿಂಡಿಕೇಟ್ ಬ್ಯಾಂಕ್, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಶಾಖೆ, ಅವೆನ್ಯೂ ರಸ್ತೆ, ಕಾವೇರಿ ಭವನದ ಮುಂಭಾಗ, ಬೆಂಗಳೂರು-02** ಹಾಗೂ **ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿಧಾನಸೌಧ ಶಾಖೆ, ಬೆಂಗಳೂರು-01** ಇವರಿಗೆ ತಿಳಿಸಿದೆ.

| ವಿದ್ಯುತ್ ಬಿಲ್ ಬಾಬ್ತಿನ ಅನುದಾನವನ್ನು ಬಿಡುಗಡೆಗೊಳಿಸಲು ವಹಿಸಬೇಕಾದ ಕ್ರಮ | ಸಿಬ್ಬಂದಿ ವೇತನ ಬಾಬ್ತಿನ ಅನುದಾನವನ್ನು ಬಿಡುಗಡೆಗೊಳಿಸಲು ವಹಿಸಬೇಕಾದ ಕ್ರಮ |
|---|---|
| • ಪ್ರತಿ ಗ್ರಾಮ ಪಂಚಾಯಿತಿಗೆ ಬಿಡುಗಡೆ ಮಾಡಿರುವ ಒಟ್ಟು ಅನುದಾನದ ಮೊತ್ತದಲ್ಲಿ(ಅನುಬಂಧ-2ರ ಕಲಂ-7) **ವಿದ್ಯುತ್ ಬಿಲ್ ಬಾಬ್ತಿನ** ಅನುದಾನವನ್ನು (ಅನುಬಂಧ-2ರ ಕಲಂ-6) ಜನವರಿ-2019ರ ರಿಂದ ಮಾರ್ಚ್-2019ರ ಅವಧಿಯ ವಿದ್ಯುತ್ ಬಿಲ್ ಪಾವತಿಸುವ ಸಲುವಾಗಿ ಮೇಲ್ಕಂಡ ಸಿಂಡಿಕೇಟ್ ಬ್ಯಾಂಕಿನಿಂದ ನೇರವಾಗಿ ಆನ್‌ಲೈನ್ ಮುಖಾಂತರ ಪ್ರಧಾನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಖಾತೆಗೆ ವರ್ಗಾಯಿಸಲು ತಿಳಿಸಿದೆ.<br>• ಸದರಿ ಅನುದಾನವನ್ನು ಪ್ರಧಾನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಖಾತೆಯಿಂದ ಗ್ರಾಮ ಪಂಚಾಯಿತಿಗಳ ಹೆಸರಿನಲ್ಲಿ ಸ್ಥಳೀಯ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಗಳಲ್ಲಿ/ಅದರ ಸಹ ಬ್ಯಾಂಕ್‌ಗಳಲ್ಲಿ ತೆರೆದಿರುವ ESCROW ಖಾತೆಗಳಿಗೆ ಜಮಾ ಮಾಡಲು ಕ್ರಮ ವಹಿಸಲು ತಿಳಿಸಲಾಗಿದೆ. | • ಪ್ರತಿ ಗ್ರಾಮ ಪಂಚಾಯಿತಿಗೆ ಬಿಡುಗಡೆ ಮಾಡಿರುವ ಒಟ್ಟು ಅನುದಾನದ ಮೊತ್ತದಲ್ಲಿ(ಅನುಬಂಧ-2ರ ಕಲಂ-7) **ಸಿಬ್ಬಂದಿ ವೇತನ ಬಾಬ್ತಿನ** ಅನುದಾನವನ್ನು (ಅನುಬಂಧ-2ರ ಕಲಂ-5) ಗ್ರಾಮ ಪಂಚಾಯಿತಿಗಳ ಸಿಬ್ಬಂದಿ ವೇತನ ಪಾವತಿಸುವ ಸಲುವಾಗಿ ಮೇಲ್ಕಂಡ ಸಿಂಡಿಕೇಟ್ ಬ್ಯಾಂಕಿನಿಂದ ನೇರವಾಗಿ ಆನ್‌ಲೈನ್ ಮುಖಾಂತರ ಪ್ರಧಾನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಖಾತೆಗೆ ವರ್ಗಾಯಿಸಲು ತಿಳಿಸಿದೆ.<br>• ಸದರಿ ಅನುದಾನವನ್ನು ಪ್ರಧಾನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಖಾತೆಯಿಂದ ಗ್ರಾಮ ಪಂಚಾಯಿತಿಗಳ ಹೆಸರಿನಲ್ಲಿ ತೆರೆದ ಸ್ಥಳೀಯ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಗಳಲ್ಲಿ/ಅದರ ಸಹ ಬ್ಯಾಂಕ್‌ಗಳಲ್ಲಿ ತೆರೆದಿರುವ ಗ್ರಾಮ ಪಂಚಾಯತಿಗಳ ಸಿಬ್ಬಂದಿ ವೇತನ ಖಾತೆಗಳಿಗೆ ಜಮಾ ಮಾಡಲು ಕ್ರಮ ವಹಿಸಲು ತಿಳಿಸಲಾಗಿದೆ. |

ಮೇಲ್ಕಂಡ ಉದ್ದೇಶಗಳಿಗಲ್ಲದೇ ಈ ಅನುದಾನವನ್ನು ಗ್ರಾಮ ಪಂಚಾಯಿತಿಗಳು ಬೇರೆ ಯಾವುದೇ ಉದ್ದೇಶಕ್ಕೆ ವಿನಿಯೋಗಿಸತಕ್ಕದ್ದಲ್ಲ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ:04:ಟಿಎಫ್‌ಪಿ:2018, ಬೆಂಗಳೂರು, ದಿನಾಂಕ: 08.01.2019 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

29/1/19

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

<u>ಇವರಿಗೆ:</u>

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.
3) ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
4) ನಿರ್ದೇಶಕರು, ಎನ್.ಎಂ.ಸಿ., ಖಜಾನೆ ಇಲಾಖೆ, ಖನಿಜ ಭವನ, ಬೆಂಗಳೂರು.
5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳು.

6) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ,ಬೆಂಗಳೂರು-01
7) ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುಚ್ಛಕ್ತಿ ಕಂಪನಿ, ಕೆ.ಆರ್.ವೃತ್ತ, ಬೆಂಗಳೂರು-01.
8) ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ ವಿದ್ಯುಚ್ಛಕ್ತಿ ಕಂಪನಿ, ಪಿ.ಬಿ.ರಸ್ತೆ, ನವನಗರ, ಹುಬ್ಬಳ್ಳಿ-580029.
9) ವ್ಯವಸ್ಥಾಪಕ ನಿರ್ದೇಶಕರು, ಗುಲ್ಬರ್ಗ ವಿದ್ಯುಚ್ಛಕ್ತಿ ಕಂಪನಿ, ಸ್ಟೇಷನ್ ರಸ್ತೆ, ಗುಲ್ಬರ್ಗ-585101.
10) ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ವಿದ್ಯುಚ್ಛಕ್ತಿ ಕಂಪನಿ, ಎ.ಬಿ.ಶೆಟ್ಟಿ ವೃತ್ತ, ಮಂಗಳೂರು-575001.
11) ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಕಂಪನಿ, ನಂ.29, ವಿಜಯನಗರ 2ನೇ ಹಂತ, ಹಿನ್ಕಲ್, ಮೈಸೂರು- 570017.
12) ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಗಳು(**ಸಂಬಂಧಿಸಿದ ಗ್ರಾಮ ಪಂಚಾಯಿತಿಗಳಿಗೆ ಈ ಆದೇಶದ ಪ್ರತಿಯನ್ನು ತಲುಪಿಸುವ ವ್ಯವಸ್ಥೆ ಮಾಡುವಂತೆ ಸೂಚಿಸಲಾಗಿದೆ.**)
13) ವ್ಯವಸ್ಥಾಪಕರು,ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ, ವಿಧಾನ ಸೌಧ ಶಾಖೆ, .ಬೆಂಗಳೂರು-01 -ಅಗತ್ಯ ಕ್ರಮಕ್ಕಾಗಿ.
14) ವ್ಯವಸ್ಥಾಪಕರು, ಸಿಂಡಿಕೇಟ್ ಬ್ಯಾಂಕ್, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಶಾಖೆ, ಅವೆನ್ಯೂ ರಸ್ತೆ, ಕಾವೇರಿ ಭವನದ ಮುಂಭಾಗ, ಬೆಂಗಳೂರು (ದೂರವಾಣಿ ಸಂಖ್ಯೆ: 080-22216450, 22215584)- ಅಗತ್ಯ ಕ್ರಮಕ್ಕಾಗಿ.
15) ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
16) ಮಾಹಿತಿ ಕೇಂದ್ರ/ವೆಬ್ ಸೈಟ್, ಗ್ರಾ.ಅ.ಪ ಇಲಾಖೆ.

ಪ್ರತಿ:

1) ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ರಾಜ್ ಪಂಚಾಯತ್ ಇಲಾಖೆ, ವಿಕಾಸಸೌಧ, ಇವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ ಇವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ.
4) ಸರ್ಕಾರದ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ.
5) ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ-6, ಆರ್ಥಿಕ ಇಲಾಖೆ, ವಿಧಾನಸೌಧ.
6) ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇಲಾಖೆ.
7) ನಿರ್ದೇಶಕರು, ಯೋಜನಾ ಉಸ್ತುವಾರಿ ಮತ್ತು ಮಾಹಿತಿ ವಿಭಾಗ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
8) ಹೆಚ್ಚುವರಿ ಪ್ರತಿ ಶಾಖಾ ರಕ್ಷಾ ಕಡತಕ್ಕೆ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 356 ಗ್ರಾಪಂಅ 2018, ದಿನಾಂಕ: 29-01-2019ರ (ಅನುಬಂಧ-1)

## 2018-19ನೇ ಸಾಲಿನಲ್ಲಿ ಗ್ರಾಮ ಪಂಚಾಯಿತಿಗಳಿಗೆ ನಾಲ್ಕನೇ ತ್ರೈಮಾಸಿಕ ಕಂತಿನಲ್ಲಿ ಬಿಡುಗಡೆ ಮಾಡುತ್ತಿರುವ ಶಾಸನಬದ್ಧ ಅನುದಾನದ ಜಿಲ್ಲಾವಾರು ವಿವರ

| ಕ್ರಸಂ | ಜಿಲ್ಲೆಯ ಹೆಸರು | ಒಟ್ಟು ಗ್ರಾಮ ಪಂಚಾಯಿತಿಗಳ ಸಂಖ್ಯೆ | 2018-19ನೇ ಸಾಲಿನ ನಾಲ್ಕನೇ ತ್ರೈಮಾಸಿಕ ಕಂತಿನಲ್ಲಿ ಬಿಡುಗಡೆಗೊಳಿಸಿದ ಶಾಸನಬದ್ಧ ಅನುದಾನದ ಮೊತ್ತ | ವಿದ್ಯುತ್ ಬಿಲ್ ಪಾವತಿಸಲು ಅನುದಾನದ ಮೊತ್ತ | ಸಿಬ್ಬಂದಿ ವೇತನ ಪಾವತಿಸಲು ಅನುದಾನದ ಮೊತ್ತ |
|---|---|---|---|---|---|
| | | | | | ರೂ.ಗಳಲ್ಲಿ |
| 1 | ಬಾಗಲಕೋಟೆ | 198 | 69368529 | 31410000 | 37958529 |
| 2 | ಬೆಂಗಳೂರು ನಗರ | 95 | 42540229 | 15900000 | 26640229 |
| 3 | ಬೆಂಗಳೂರು (ಗ್ರಾಮೀಣ) | 105 | 41278905 | 17325000 | 23953905 |
| 4 | ಬೆಳಗಾವಿ | 505 | 170672588 | 83415000 | 87257588 |
| 5 | ಬಳ್ಳಾರಿ | 200 | 76396463 | 36270000 | 40126463 |
| 6 | ಬೀದರ್ | 185 | 77338627 | 29700000 | 47638627 |
| 7 | ಚಾಮರಾಜನಗರ | 130 | 56267190 | 20445000 | 35822190 |
| 8 | ಚಿಕ್ಕಬಳ್ಳಾಪುರ | 157 | 66917543 | 24000000 | 42917543 |
| 9 | ಚಿಕ್ಕಮಗಳೂರು | 227 | 75119250 | 34395000 | 40724250 |
| 10 | ಚಿತ್ರದುರ್ಗ | 189 | 78460885 | 30270000 | 48190885 |
| 11 | ದಕ್ಷಿಣ ಕನ್ನಡ | 230 | 69837515 | 36765000 | 33072515 |
| 12 | ದಾವಣಗೆರೆ | 233 | 83051607 | 35955000 | 47096607 |
| 13 | ಧಾರವಾಡ | 144 | 53460828 | 22530000 | 30930828 |
| 14 | ಗದಗ | 122 | 44342166 | 19005000 | 25337166 |
| 15 | ಹಾಸನ | 267 | 111200145 | 40920000 | 70280145 |
| 16 | ಹಾವೇರಿ | 224 | 80438226 | 34605000 | 45833226 |
| 17 | ಕಲಬುರಗಿ | 264 | 105559340 | 41925000 | 63634340 |
| 18 | ಕೊಡಗು | 104 | 33774616 | 15825000 | 17949616 |
| 19 | ಕೋಲಾರ | 156 | 73125308 | 24240000 | 48885308 |
| 20 | ಕೊಪ್ಪಳ | 153 | 60552077 | 24825000 | 35727077 |
| 21 | ಮಂಡ್ಯ | 234 | 95696801 | 36225000 | 59471801 |
| 22 | ಮೈಸೂರು | 266 | 101427945 | 43365000 | 58062945 |

| | | | | | |
|---|---|---|---|---|---|
| 23 | ರಾಯಚೂರು | 180 | 62298533 | 30075000 | 32223533 |
| 24 | ರಾಮನಗರ | 127 | 57648982 | 19695000 | 37953982 |
| 25 | ಶಿವಮೊಗ್ಗ | 271 | 92917302 | 40860000 | 52057302 |
| 26 | ತುಮಕೂರು | 330 | 129653961 | 50730000 | 78923961 |
| 27 | ಉಡುಪಿ | 158 | 42695453 | 25335000 | 17360453 |
| 28 | ಉತ್ತರ ಕನ್ನಡ | 231 | 69073835 | 35580000 | 33493835 |
| 29 | ವಿಜಯಾಪುರ | 213 | 83457830 | 35295000 | 48162830 |
| 30 | ಯಾದಗಿರಿ | 123 | 53011295 | 20430000 | 32581295 |
| ಒಟ್ಟು | | **6021** | **2257583974** | **957315000** | **1300268974** |

24/1/15

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.